5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆ, ಪುತ್ತೂರು, ದ.ಕ.

## ಸೆಷನ್ಸ್ ಕೇಸ್ ನಂಬ್ರ **5017/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದಯಾನಂದ ಎಂ.ಎಸ್. | ಪ್ರಾಸಾ: 11 |
| ತಂದೆಯ ಹೆಸರು | : | ಸುಬ್ಬಣ್ಣ ನಾಯ್ಕ | ಚಾಸಾ: 14 |
| ಪ್ರಾಯ | : | 37 ವರ್ಷ | ದಿನಾಂಕ: **22.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಆಟೋರಿಕ್ಷಾ ಚಾಲಕ | |
| ವಾಸಸ್ಥಳ | : | ಮಹಬಲಡ್ಕ ಮನೆ,<br>ಜಾಲ್ಸೂರು ಗ್ರಾಮ ಮತ್ತು ಅಂಚೆ,<br>ಸುಳ್ಯ ತಾಲೂಕು. | |

ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರಿಂದ:

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ವತ್ತು ಸ್ವಾಧೀನತಾ ಮಹಜರು ಆಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-12 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಅದನ್ನು ಓದಿ ನೋಡಿರುವುದಿಲ್ಲ ಮತ್ತು ಅದೇ ರೀತಿ ಪೊಲೀಸರಿಗೆ ನನಗೆ ಅದನ್ನು ಓದಿ ತಿಳಿಸಿರುವುದಿಲ್ಲ. ನಾನು ಸುಮಾರು 8 - 9 ವರ್ಷಗಳ ಪೂರ್ವದಲ್ಲಿ ಸ್ವಂತ ಕೆಲಸದ ಮೇಲೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡುವ ಕಾಲಕ್ಕೆ ಪ್ರಾಸಾ.2 ರವರನ್ನು ನೋಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮುಮಾ-2 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನಿಶಾನೆ ಪಿ-10 ಛಾಯಾಚಿತ್ರದಲ್ಲಿ ಕಂಡು ಬರುವ ಜೀಪನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತವನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>

2. ದಿನಾಂಕ 18.11.2015 ರಂದು ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ದೇವರಗುಂಡದಿಂದ ದೇಲಂಪಾಡಿಗೆ ಹೋಗುವ ಸಾರ್ವಜನಿಕ ಡಾಂಬಾರು ರಸ್ತೆಯಿಂದ ಕವಲೊಡೆದು ಬಿ.ಎಸ್.ಎನ್.ಎಲ್. ಮೈಕ್ರೋ ಟವರಿಗೆ ಹೋಗುವ ರಸ್ತೆಯ ಬದಿಯಲ್ಲಿ ಯಾವುದೇ ನಂಬರ್ ಪ್ಲೇಟ್ ಇಲ್ಲದ ಜೀಪು ಅನಾಥವಾಗಿ ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದು, ಅದನ್ನು ಯಾವುದೋ ಕೃತ್ಯಕ್ಕೆ ಬಳಸಿ ತಂದಿಟ್ಟಿರಬಹುದು ಎಂಬ ಅನುಮಾನದಿಂದ ಮತ್ತು ಪ್ರಾಸಾ.2 ರವರು ನೀಡಿದ ದೂರಿನಲ್ಲಿ ನಮೂದಿಸಿರುವ ಜೀಪಿನ ವಿವರಕ್ಕೂ ಹಾಗೂ ರಸ್ತೆಯ ಬದಿಯಲ್ಲಿ ಅನಾಥವಾಗಿ ನಿಲ್ಲಿಸಿದ್ದ ಜೀಪಿಗೆ ಹೋಲಿಕೆಯಾಗುವ ಹಿನ್ನೆಲೆಯಲ್ಲಿ ಅದನ್ನು ಗುರುತಿಸಲು ಪ್ರಾಸಾ.2 ರವರಿಗೆ ಈ ಪ್ರಕರಣದ ತನಿಖಾಧಿಕಾರಿಯು ಮಾಹಿತಿ ನೀಡಿ, ಸ್ಥಳಕ್ಕೆ ಬರುವಂತೆ ಹೇಳಿದ್ದು, ಅವರು ಈ ಮೇಲೆ ಹೇಳಿದ ಸ್ಥಳಕ್ಕೆ ಬಂದಿದ್ದು, ಆ ಸಂದರ್ಭದಲ್ಲಿ ಸದರಿ ಜೀಪನ್ನು ಜಪ್ತುಪಡಿಸಿಕೊಳ್ಳುವ ಉದ್ದೇಶದಿಂದ ನನ್ನನ್ನು ಹಾಗೂ ಚಾಸಾ.15 ರವರನ್ನು ಪಂಚರಾಗಿ ಸಹಕರಿಸುವಂತೆ ಪೊಲೀಸರು ಕೋರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವಿಬ್ಬರೂ ಸ್ಥಳಕ್ಕೆ ಬಂದಾಗ ಪ್ರಾಸಾ.2 ರವರು ಸ್ಥಳದಲ್ಲಿ ಹಾಜರಿದ್ದು, ನಮ್ಮ ಸಮಕ್ಷಮ ಅವರು ಇದೇ ಜೀಪನ್ನು ಚಲಾಯಿಸಿಕೊಂಡು ಬಂದು ಆರೋಪಿತರು ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ಹೇಳಿದ ಮೇರೆಗೆ ಸದರಿ ಜೀಪನ್ನು ನಮ್ಮ ಸಮಕ್ಷಮದಲ್ಲಿ ಪರಿಶೀಲಿಸಿ ನೋಡಿದಾಗ ಅದು ಮಹೀಂದ್ರ ಕಂಪನಿಯ ಜೀಪು ಆಗಿದ್ದು, ಅದರಲ್ಲಿ ಇದ್ದ ಕಂಪನಿಯ ಪ್ಲೇಟ್ ಮೇಲೆ ಚಾಸಿಸ್ ನಂಬರ್ C-J4-4-7-210206 ಎಂದು ಬರೆದಿದ್ದು, ಇಂಜಿನ್ ನಂಬರ್ 7210206 ಆಗಿದ್ದು, ಸೀರಿಯಲ್ 102881 ಆಗಿದ್ದು, Year 1972 ಬರೆದಿರುವುದು ಕಂಡು ಬಂದಿರುತ್ತದೆ, ಜೀಪಿನ ಹಿಂಭಾಗದ ಡೋರ್ ನ್ನು ಪರಿಶೀಲಿಸಿದಾಗ CL550MD ಆಗಿದ್ದು, ಬಿಳಿಬಣ್ಣದ ಸ್ಟಿಕ್ಕರ್ ನಲ್ಲಿ ಕಪ್ಪು ಅಕ್ಷರದಲ್ಲಿ M

ಎಂದು ಬರೆದಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಜೀಪಿನ ಮುಂಭಾಗದ ಸೀಟಿನ ಎಡಭಾಗದ ಕೆಳಗಡೆ ಮುಮಾ-2 ಇದ್ದು, ಅದನ್ನು ನಮ್ಮ ಸಮಕ್ಷಮ ವಶಪಡಿಸಿಕೊಂಡು ಅದನ್ನು ಬಿಳಿಬಟ್ಟೆಯಿಂದ ಸುತ್ತಿ, ಹೊಲಿದು, ಪ್ಯಾಕ್ ಮಾಡಿ, ಅರಗು ಸೀಲು ಮಾಡಿ ನಮ್ಮ ಮತ್ತು ತನಿಖಾಧಿಕಾರಿಯವರ ಸಹಿ ಇರುವ ಚೀಟಿಯನ್ನು ಮುಮಾ-2 ರ ಮೇಲೆ ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಮುಮಾ-2 ರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಹಿ ನನ್ನದಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ನಿಶಾನೆ ಪಿ-12 ನ್ನು ಸಂಜೆ 5.00 ಗಂಟೆಯಿಂದ 5.15 ಗಂಟೆಯ ವರೆಗೆ ಸ್ಥಳದಲ್ಲೇ ತಯಾರಿಸಿ, ಅದರ ವಿವರಗಳನ್ನು ನಮಗೆ ಓದಿ ಹೇಳಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮದಲ್ಲಿ ವಶಪಡಿಸಿಕೊಂಡಿರುವ ಜೀಪು ನಿಶಾನೆ ಪಿ-10 ರಲ್ಲಿ ಕಂಡು ಬರುವ ಜೀಪು ಆಗಿರುತ್ತದೆ ಎಂದರೆ ಸರಿಯಲ್ಲ.

3. ಪ್ರಸ್ತುತ ಪ್ರಾಸಾ.2 ರವರು ಮೃತಪಟ್ಟಿದ್ದಾರೆ. ಪ್ರಾಸಾ.2 ರವರು ಮೃತಪಟ್ಟಿದ್ದರಿಂದ ಮತ್ತು ಆರೋಪಿತರು ನನ್ನ ಪರಿಚಯಸ್ಥರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ಮತ್ತು **2**ನೇ ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ</u>

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.